## ಶಾಕಿರಾ ಪರ್ವೀನ್
## ಸಂದರ್ಶನ

◆ **ನಿಮ್ಮ ಬಾಲ್ಯದ ಪರಿಸರ ಮತ್ತು ಶಾಲಾದಿನಗಳ ಬಗ್ಗೆ ತಿಳಿಸಿ**

ನಾವು ಐದು ಜನ ಒಡಹುಟ್ಟಿದವರು. ತಂದೆ ನಿವೃತ್ತ ಸರ್ಕಾರಿ ನೌಕರ. ತಾಯಿ ಗೃಹಿಣಿ. ಆಕೆ ನಮ್ಮ ಕುಟುಂಬದ ನಿಜವಾದ ಪ್ರೇರಕ ಶಕ್ತಿ. ಗಾಳಿ-ಮಳೆಯ ದಿನದಲ್ಲಿ ಮಾವನ ಮನೆಯ ಮಾವಿನ ಮರದಲ್ಲಿ ಕದ್ದು ಹಣ್ಣು ಕೀಳೋದು, ಅಜ್ಜಿ ಮನೆಯಲ್ಲಿ ಎಲ್ಲರೊಡಗೂಡಿ ಬಕುಲ ಹೂವಿನ ಮಾಲೆ ಕಟ್ಟೋದು, ಮನೆ ಹತ್ತಿರದ ಕೆರೆಯಲ್ಲಿ ಈಜೋದು... ಇವೆಲ್ಲ ಮರೆಯಲಾಗದ ಖುಷಿಯ ನೆನಪುಗಳು. ಆ ಸಮಯದಲ್ಲಿ ನಮ್ಮ ಬೇಡಿಕೆಗಳು ಕಡಿಮೆ ಇದ್ದವು. ಅದಕ್ಕೆ ಅನಿಸುತ್ತೆ ಸಂತೋಷ ಜಾಸ್ತಿ ಇತ್ತು. ಚಿಕ್ಕ ಪುಟ್ಟ ವಿಷಯಗಳನ್ನ ನಾವು ಸಂಭ್ರಮಿಸುತ್ತಿದ್ದೆವು. ಓದಿದ್ದೆಲ್ಲ ಸರ್ಕಾರಿ ಶಾಲೆಯಲ್ಲಿ. ಶಾಲೆಯಲ್ಲಿ ಊಟದ ಘಂಟೆ ಹೊಡೆದ ತಕ್ಷಣ, ಮೈದಾನಕ್ಕೆ ಓಡಿ ಹೋಗಿ ಹಲವಾರು ಆಟಗಳನ್ನು ಆಡುತ್ತಿದ್ದೆವು. ಕುಂಟಾಬಿಲ್ಲೆ, ಕಣ್ಣಾಮುಚ್ಚಾಲೆ. ನಮ್ಮ ನಗು– ಕೇಕೆ ಮುಗಿಲು ಮುಟ್ಟಿ ಶಿಕ್ಷಕರಿಂದ, ದಾರಿಹೋಕರಿಂದ 'ಆಕಾಶ ಬೀಳೋ ಹಾಂಗ ನಗ್ತೀರಿ' ಅಂತ ಬೈಸಿಕೊಂಡಿದ್ದೂ ಇದೆ. ಮಳೆಯ ದಿನಗಳಲ್ಲಿ ಹಳೇ ನೋಟ್‌ಪುಸ್ತಕದ ಪುಟಗಳು ದೋಣಿಗಳಾಗಿ ಕೆಸರು ನೀರಿನಲ್ಲಿ ತೇಲುತ್ತಿದ್ದವು ಮತ್ತು ನಾವದನ್ನ ನೋಡುತ್ತಾ ನಿಂತು ಬಿಡುತ್ತಿದ್ದೆವು. ಮುಖ್ಯೋಪಾಧ್ಯಾಯರ ನಿವೃತ್ತಿ ಸಮಾರಂಭದಲ್ಲಿ ನಾವೆಲ್ಲರೂ ಬಿಕ್ಕಿ ಅಳುತ್ತಾ ಕಣ್ಣೀರು ಹಾಕಿದ್ದು ಈಗಲೂ ನೆನಪಿದೆ. ಆ ಸರಳ ದಿನಗಳೇ ಇಂದಿನ ನನ್ನನ್ನ ರೂಪಿಸಿವೆ. ಅದೇ ನನ್ನ ನಿಜವಾದ ಆಸ್ತಿ.

◆ **ಬಾಲ್ಯದ ತುಂಟಾಟದ ಘಟನೆ ಯಾವುದಾದರೂ ನೆನಪಿದೆಯಾ?**

ತುಂಟಾಟದ ಘಟನೆಗಳಿಗೇನೂ ಕೊರತೆಯಿಲ್ಲ. ಕೆಲವು ಪ್ರಸಂಗಗಳು ಈಗಲೂ ನನ್ನಲ್ಲಿ ನಗು ಉಕ್ಕಿಸುತ್ತವೆ. ಅವರಿವರ ಮನೆಯ ಸೀಬೆ, ಮಾವಿನ ಮರಗಳನ್ನ ಹತ್ತಿ ಹಣ್ಣು ಕದಿಯೋದು ಆಗ ನನಗೆ ಬಲು ಇಷ್ಟದ ಆಟ. ಈ ಹಣ್ಣಿನ ಮರಗಳು ನಮ್ಮ ಮನೆಯ ಹಿತ್ತಲಲ್ಲಿ ಇದ್ದರೂ, ಕದಿಯೋದು ನಮಗಾಗ ಬಹಳ ಮಜ ಕೊಡುತ್ತಿತ್ತು. ಅದೊಂದು ಸಾಹಸಮಯ ಜಗತ್ತು. ಸಂಜೆ ಆಗುತ್ತಿದ್ದಂತೆ ಏರೋಪ್ಲೇನ್ ಚಿಟ್ಟೆಗಳ ಹಿಂದೆ ಓಡೋದು, ಬೀಳೋದು, ಏಳೋದಕ್ಕೆ ಲೆಕ್ಕವೇ ಇರ್ತಿರಲಿಲ್ಲ. ಆ ಗಾಯದ ಗುರುತುಗಳು ಈಗಲೂ ಇವೆ. ಪರೀಕ್ಷೆಯ ದಿನ ಉತ್ತರಗಳನ್ನು ಕೈಯಲ್ಲಿ ಬರೆದು ಕೊಂಡು ಹೋಗಿ ಸಿಕ್ಕಿಬಿದ್ದಿದ್ದೆ. ನನಗಾಗ ಅದು ಚತುರ ಕೆಲಸ ಅನಿಸಿತ್ತು. ಚಿಕ್ಕ ವಯಸ್ಸಿನಲ್ಲಿ ನಾನು ಗಂಡುಬೀರಿಯಾಗಿದ್ದೆ. ಬೆಳೆಯುತ್ತಾ ತುಂಟತನಗಳು ಬದಿಗೆ ಸರಿದವು ಅಥವಾ ಬದುಕು ಅವುಗಳನ್ನು ಮರೆ ಮಾಡಿತು.

◆ **ಒಂದು ಸಿನಿಮಾವನ್ನು ನೋಡುವ ಬಗೆ ಹೇಗೆ? ಅದೊಂದು 'ರಸಗ್ರಹಣ' ತರಬೇತಿಯೇ? ನಿಮ್ಮ ನೆಚ್ಚಿನ ಒಂದೆರಡು ಸಿನಿಮಾಗಳ ಕುರಿತು ಹೇಳಿ..**

ಸಿನಿಮಾ ಮತ್ತು ಪತ್ರಿಕೋದ್ಯಮ ಸಮೂಹ ಸಂವಹನ ನನ್ನ ವೃತ್ತಿ. ಕಿರುತೆರೆಯ ಕಾರ್ಯಕ್ರಮಗಳ ನಿರ್ಮಾಪಕಿಯಾಗಿ ಕೆಲಸ ಮಾಡೋದಂದ್ರೆ ನನಗೆ ಇಷ್ಟ. ಸ್ವಲ್ಪ ಬಿಡುವು ಸಿಕ್ಕರೂ ಸಾಕು ಕವಿತೆ ಬರೀತೀನಿ ಇಲ್ಲವೇ ಸಂಗೀತಾಭ್ಯಾಸ ಮಾಡ್ತೀನಿ. ಅವು ನನ್ನ ಆಂತರಿಕ ಹಸಿವನ್ನು ಇಂಗಿಸುತ್ತವೆ.

ನಾವು ಕವಿತೆ ಯಾಕೆ ಓದುತ್ತೇವೆ, ಸಂಗೀತವನ್ನು ಏಕೆ ಕೇಳುತ್ತೇವೆ, ಚಲನಚಿತ್ರಗಳನ್ನು ನೋಡುವುದು ಯಾಕೆ? ಪುರಾತನ ವಾಸ್ತುಶಿಲ್ಪ ಅಥವಾ ಉದುರಿ ಬಿದ್ದ ಎಲೆಯ ಹಾಡನ್ನು ಏಕೆ ಕೇಳುತ್ತೇವೆ... ಒಬ್ಬನೇ ಚಂದ್ರನನ್ನು ಸಾವಿರ ಬಾರಿ ಏಕೆ ನೋಡುತ್ತೇವೆ? ಇದಕ್ಕೆ ಒಂದು ಉತ್ತರ ಕೊಡಬಹುದು ಒಂದು ಅಥವಾ ಹಲವು! ಇದು ಒಂದು ವಸ್ತು ವಿಷಯವನ್ನು ಒಬ್ಬರು ಹೇಗೆ ನೋಡುತ್ತಿದ್ದಾರೆ ಅಥವಾ ಗ್ರಹಿಸುತ್ತಿದ್ದಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಕವಿತೆಯು ಅತ್ಯಂತ ಹ್ರಸ್ವ ಶಕ್ತಿಶಾಲಿ ಮಾಧ್ಯಮವಾಗಿರುವಂತೆಯೇ, ಸಿನಿಮಾ ಅತ್ಯಂತ ಶಕ್ತಿಶಾಲಿ ತಾರ್ಕಿಕ ಕಲೆಯಾಗಿದೆ. ಚಲನಚಿತ್ರವು ಏಕಕಾಲದಲ್ಲಿ ನಮ್ಮ ಕಣ್ಣು– ಕಿವಿಗಳನ್ನು ತೊಡಗಿಸಿಕೊಳ್ಳುವ ಮನರಂಜನೆಯ ಮಾಧ್ಯಮ.